ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ,ತರೀಕೆರೆ

ಸಿ.ಸಿ.ನಂಃ 49/2024

ಫಿರ್ಯಾದುದಾರರುಃ ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

ಃವಿರುದ್ಧ ಃ

ಆರೋಪಿಃ

1. ಶ್ರೀ ನಾಗರಾಜಪ್ಪ,
ಬಿನ್ ಶ್ರೀ ಪುಟ್ಟಪ್ಪ,
58 ವರ್ಷ,
2. ಶ್ರೀಮತಿ ಯಶೋದಮ್ಮ,
ಕೋಂ ನಾಗರಾಜಪ್ಪ,
55 ವರ್ಷ,
3. ಶ್ರೀ ಪರಮೇಶ,
ಬಿನ್ ಶ್ರೀ ತಿಮ್ಮಪ್ಪ,
40 ವರ್ಷ,
4. ಶ್ರೀ. ಎಸ್. ರಂಗನಾಥ,
ಬಿನ್ ಶ್ರೀ ಸಣ್ಣಪ್ಪ,
48 ವರ್ಷ,
5. ಟಿ. ರಂಗನಾಥ,
ಬಿನ್ ಶ್ರೀ ತಿಮ್ಮಪ್ಪ,
48 ವರ್ಷ,
6. ಶ್ರೀಮತಿ ವಸಂತಕುಮಾರಿ,
ಕೋಂ ಶ್ರೀ ಪರಮೇಶ್ವರಪ್ಪ,
35 ವರ್ಷ,
7. ಶ್ರೀಮತಿ ಪುಷ್ಪವತಿ,
ಕೋಂ ಶ್ರೀ ಚಂದ್ರಪ್ಪ,
32 ವರ್ಷ,

8. ಶ್ರೀಮತಿ ರಾಧಮ್ಮ,
ಕೋಂ ಶ್ರೀ ಚಂದ್ರಪ್ಪ,
56 ವರ್ಷ,
9. ಶ್ರೀಮತಿ ರಂಗಮ್ಮ,
ಕೋಂ ಶ್ರೀ ಮೇದನಪ್ಪ,
62 ವರ್ಷ,
10. ಶ್ರೀಮತಿ ಶಿವಮ್ಮ,
ಕೋಂ ಶ್ರೀ ರಂಗನಾಥ,
38 ವರ್ಷ,
ಎಲ್ಲರ ವಾಸಃ ಗುಡ್ಡದಹಳ್ಳಿ ಗ್ರಾಮ,
ಅಜ್ಜಂಪುರ ತಾಲ್ಲೂಕು.

ದೋಷಾರೋಪಣೆ

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ., ತರೀಕರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 20.09.25023 ರಂದು ಬೆಳಿಗ್ಗೆ ಸುಮಾರು 8.45 ಗಂಟೆಗೆ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಗುಡ್ಡದಹಳ್ಳಿ ಗ್ರಾಮದ ವಾಸಿಯಾದ ಚಾಸಾ-1/ ಶ್ರೀಮತಿ ಜಿ.ವಿ. ಅನುರಾಧ ಮತ್ತು ಚಾಸಾ-4/ ಶ್ರೀಮತಿ ಸುಶೀಲಮ್ಮ ರವರು ಗುಡ್ಡದಹಳ್ಳಿ ಗ್ರಾಮದ ಸರ್ವೇ ನಂಬರ್ 1/7 ರಲ್ಲಿನ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ 1 ರಿಂದ 10 ನೇ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಗುಂಪು ಕಟ್ಟಿಕೊಂಡು ಬಂದು ದೊಂಬಿ ನಡೆಸಿರುತ್ತೀರಿ, ಈ ರೀತ್ಯ 1 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 10 ನೇ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು ಅಕ್ರಮ ಗುಂಪನ್ನು ಕಟ್ಟಿಕೊಂಡು ಬಂದು ದೊಂಬಿ ಮಾಡಿರುತ್ತೀರಿ ರೀತ್ಯ 1 ರಿಂದ 10 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 10 ನೇ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು ಅಕ್ರಮ ಗುಂಪನ್ನು ಕಟ್ಟಿಕೊಂಡು ಬಂದು ಕೈಯಲ್ಲಿ ಮಾರಕ ಆಯುಧಗಳನ್ನು ಹೊಂದಿರುತ್ತೀರಿ. ರೀತ್ಯ 1 ರಿಂದ 10 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 144 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 10 ನೇ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು ಅಕ್ರಮ ಗುಂಪನ್ನು ಕಟ್ಟಿಕೊಂಡು ಬಂದು ಕೈಯಲ್ಲಿ ಮಾರಕ ಆಯುಧಗಳನ್ನು ಹೊಂದಿ ದೊಂಡಿ ಮಾಡಿರುತ್ತೀರಿ. ರೀತ್ಯ 1 ರಿಂದ 10 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 148 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 10 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ಆರೋಪಿತರಾದ ನೀವು ಚಾಸಾ–1 ಮತ್ತು 4 ರವರಿಗೆ ನೀವು ಇಲ್ಲಿ ಏಕೆ ಕೆಲಸ ಮಾಡುತ್ತಿದ್ದೀರಿ ಎಂದು ಚಾಸಾ–1 ಮತ್ತು 4 ರವರ ಶಾಂತಿಭಂಗ ಮಾಡುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿರುತ್ತೀರಿ. ಈ ರೀತ್ಯ 1 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 10 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 1 ಮತ್ತು 2 ರಿಂದ 4 ನೇ ಆರೋಪಿತರಾದ ನೀವು ದೊಣ್ಣೆಯಿಂದ ಚಾಸಾ–1 ಮತ್ತು 4 ರವರ ಮೈಕೈಗೆ ಹೊಡೆದಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಏಳನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 10 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ಚಾಸಾ–1 ರವರ ಸೀರೆ ಮತ್ತು ಜಾಕೇಟನ್ನು ಹಿಡಿದು ಎಳೆದಾಡಿ ಹರಿದು ಹಾಕಿ ಅಪರಾಧಿಕ ಬಲಪ್ರಯೋಗವನ್ನು ಮಾಡಿರುತ್ತೀರಿ. ಈ ರೀತ್ಯ 1 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 354(ಬಿ) ಸಹವಾಚಕ ಕಲಂ

149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎಂಟನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 10 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 5 ರಿಂದ 10 ನೇ ಆರೋಪಿತರು ಚಾಸಾ–1 ಮತ್ತು 2 ರವರಿಗೆ ಕಲ್ಲುಗಳಿಂದ ಮೈಕೈಗೆ ಹೊಡೆದಿರುತ್ತೀರಿ ಮತ್ತು ಚಾಸಾ–1 ರವರಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 326 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಓಂಭತ್ತನೆಯದಾಗಿ , ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 10 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 5 ರಿಂದ 10 ನೇ ಆರೋಪಿತರು ಚಾಸಾ–1 ಮತ್ತು 2 ರವರನ್ನು ಕೆಳಗೆ ಬೀಳಿಸಿ ತುಳಿದಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಕೊನೆಯಾದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 10 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ಆರೋಪಿತರಾದ ನೀವು ಚಾಸಾ–1 ಮತ್ತು 2 ರವರಿಗೆ ನೀವೇನಾದರೂ ಈ ಜಮೀನಿಗೆ ಕಾಲಿಟ್ಟರೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲವೆಂದು ಕೊಲೆಬೆದರಿಕೆ ಹಾಕಿರುತ್ತೀರಿ. ಈ ರೀತ್ಯ 1 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ 1 ನೇ ರಿಂದ 10 ನೇ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರಶ್ನೆ: 1 : ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಉತ್ತರಃ : ಆರೋಪಿಃ1. Yes
ಆರೋಪಿಃ2. Yes

ಆರೋಪಿ3. Yes
ಆರೋಪಿ4. Yes
ಆರೋಪಿ5. Yes
ಆರೋಪಿ6. Yes
ಆರೋಪಿ7. Yes
ಆರೋಪಿ8. Yes
ಆರೋಪಿ9. Yes
ಆರೋಪಿ10.Yes

ಪ್ರಶ್ನೆ 2 : ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ : ಆರೋಪಿ1. Pleaded not guilty and claimed to be tried
ಆರೋಪಿ2. Pleaded not guilty and claimed to be tried
ಆರೋಪಿ3. Pleaded not guilty and claimed to be tried
ಆರೋಪಿ4. Pleaded not guilty and claimed to be tried
ಆರೋಪಿ5. Pleaded not guilty and claimed to be tried
ಆರೋಪಿ6. Pleaded not guilty and claimed to be tried
ಆರೋಪಿ7. Pleaded not guilty and claimed to be tried
ಆರೋಪಿ8. Pleaded not guilty and claimed to be tried
ಆರೋಪಿ9. Pleaded not guilty and claimed to be tried
ಆರೋಪಿ10. Pleaded not guilty and claimed to be tried

(ಆರೋಪಿಗಳಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ದಿನಾಂಕಃ 13.06.2025.

ಸಹಿ/-

(ರಾಹುಲ್ ಶೆಟ್ಟಿಗಾರ್)
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾದಂ., ತರೀಕರೆ
(ಸಂಚಾರಿ ನ್ಯಾಯಾಲಯ , ಅಜ್ಜಂಪುರ

ಆರೋಪಿಗಳ ಸಹಿಃ

ಆರೋಪಿ ಸಂಃ 1. ……………………………….

ಆರೋಪಿ ಸಂಃ 2……………………………….

ಆರೋಪಿ ಸಂಃ 3……………………………….

ಆರೋಪಿ ಸಂಃ 4……………………………….

ಆರೋಪಿ ಸಂಃ 5……………………………….

ಆರೋಪಿ ಸಂಃ 6……………………………….

ಆರೋಪಿ ಸಂಃ 7……………………………….

ಆರೋಪಿ ಸಂಃ 8……………………………….

ಆರೋಪಿ ಸಂಃ 9……………………………….

ಆರೋಪಿ ಸಂಃ 10……………………………….